ಕರೆದೊಯ್ಯತೊಡಗಿತು. ಅಧ್ಯಯನ ಪ್ರವಾಸದ ಉಪಾಯ ಫಲ ಕೊಟ್ಟಿತು. ಈಗೀಗ ಬಹುತೇಕ ಗುಮಾನಿಗಳೂ ಕರಗಿಹೋಗಿವೆ.

ಸಂಪೂರ್ಣ ಮಳೆವಿಶ್ವಾಸಿ ಗ್ರಾಮ

ಮಧುಗಿರಿ ತಾಲೂಕಿನ ಗಮಕಾರನಹಳ್ಳಿಯಲ್ಲಿ ಹಿಂದಿನಿಂದಲೂ ಕುಡಿನೀರ ಸಮಸ್ಯೆ ತೀವ್ರವಾಗಿತ್ತು. ನೀರಿಗಾಗಿ ಪ್ರತಿ ಮನೆಯವರೂ ಎರಡು ಕಿ.ಮೀ. ಪಯಣಿಸಬೇಕಿತ್ತು. ಏನೇನೋ ಮಾಡಿ ಸೈಕಲ್, ಮೋಟಾರ್ ಬೈಕ್ ಮೇಲೆ ನೀರು ತರುತ್ತಿದ್ದರು. ಕರೆಂಟ್ ಇಲ್ಲದಿದ್ದರೆ ಒಂದೆರಡು ದಿನ ನೀರೇ ಇಲ್ಲ.

ಮೊದಲ ವರ್ಷ ನಿರ್ಮಿಸಿದ ತೊಟ್ಟಿಗಳು ಮಳೆಕೊಯ್ಲಿನ ರಾಯಭಾರಿಗಳಾದುವು. ಜನ ಉತ್ಸಾಹದಿಂದ ಮುಂದೆ ಬಂದು ಅರ್ಜಿ ಹಾಕತೊಡಗಿದರು. 250 ಅರ್ಹ ಮನೆಗಳ ಪೈಕಿ ಈಗ 200ಕ್ಕೂ ಮಳೆಟಾಂಕಿಯಿದೆ. ಮಳೆಯೂ ಚೆನ್ನಾಗಿ ಬಿದ್ದಿದೆ. ಹಿರಿಯರು ತಮಗಾದ ಪ್ರಯೋಜನಗಳ ಬಗ್ಗೆ ಸಾರಿ ಹೇಳುತ್ತಿತ್ತಾರೆ. 'ಮಳೆನೀರೇ ಮದ್ದು' ಎಂಬುದು ಊರಿಗಿಡೀ ಅರ್ಥವಾಗಿದೆ.

'ಈಗ ನೀರು ತರಲು ಓಟ ಇಲ್ಲ. ಕರೆಂಟಿನ ಚಿಂತೆಯೇ ಇಲ್ಲ. ಎಟಿಎಂನಂತೆ ಇವರ ಹೆಮ್ಮೆಯ ಏಟಿಡಬ್ಲ್ಯೂ ಜತೆಗೇ ಇದೆ. ಗಮಕಾರನಹಳ್ಳಿ ಬಹುಬೇಗನೆ ನೂರು ಶೇಕಡಾ ಮಳೆಕೊಯ್ಲು ಗ್ರಾಮ ಆಗಲಿದೆ' ಎನ್ನುತ್ತಾರೆ ವಿಶ್ವನಾಥ್ ಎಸ್. ಭಟ್.

ಮಳೆಯೇ ಕಡಿಮೆ

ಪಂಡಿತ್ ಪಾಟೀಲ್ ಅವರ ಪ್ರಕಾರ, ಚಾವಣಿ ನೀರಿನ ಸಂಗ್ರಹದ ಮಾರ್ಗದಲ್ಲಿ ಎರಡು ಮುಖ್ಯ ಮಿತಿಗಳಿವೆ. ಮೊದಲನೆಯದು ತೊಟ್ಟಿ ಕಟ್ಟಿಸಲು ಬೇಕಾದಷ್ಟು ಸೂಕ್ತ ಜಾಗ. ಎರಡನೆಯದು ಅತ್ಯವಶ್ಯವಾದ ಕನಿಷ್ಠ 25 ಚದರ ಮೀಟರಿನ ಚಾವಣಿ.

'ಮಳೆ ಕೊರತೆಯ ಕಾರಣದಿಂದ ತೊಟ್ಟಿಗಳು ಕೊಡಬಹುದಾದಷ್ಟು ಪ್ರಯೋಜನ ಕೊಟ್ಟಿಲ್ಲ. ಈ ವರ್ಷ ಇವುಗಳ ಪೂರ್ಣ ಉಪಯೋಗ ಸಿಗಬಹುದು. ಐದು ಮಂದಿಯ ಕುಟುಂಬಕ್ಕೆ ದಿನಕ್ಕೆ ಕುಡಿಯಲು ಮತ್ತು ಅಡುಗೆಗೆ 10–12 ಲೀಟರ್ ಸಾಕು. ಒಮ್ಮೆ ಪೂರ್ತಿ ತುಂಬಿದರೆ ವರ್ಷವಿಡೀ ಸಾಕು' ಎನ್ನುತ್ತಾರೆ ವಿಶ್ವನಾಥ್ ಭಟ್. ಈಗ ಹಲವು ಕುಟುಂಬಗಳು ತೊಟ್ಟಿ ನೀರನ್ನು ಕುಡಿಯಲಷ್ಟೇ ಬಳಸುತ್ತಿವೆ; ಕೆಲವರಿಗೆ ಏಳೆಂಟು ತಿಂಗಳಿಗೆ ಮಾತ್ರ ಸಾಕಾಗಿದೆ.

ನಗರಗಳ ಮೇಲುವರ್ಗದ ಕೆಲವರಿಗೆ ಇನ್ನೂ ಚಾವಣಿ ನೀರ ಸಂಗ್ರಹದ (ಚಾನೀಸಂ) ಸ್ಪಷ್ಟ ಕಲ್ಪನೆ ಇಲ್ಲ. 'ಅದನ್ನು ಬಳಸುವುದೇ? ಇಸ್ಸಿ' ಎಂದು ಕೇಳುವವರೂ ಇದ್ದಾರೆ. ಈ ಪರಿಸ್ಥಿತಿಯಲ್ಲೂ, ಹಳ್ಳಿಗರಿಗೆ 'ಚಾನೀಸಂ' ಪರಿಚಯಿಸಿ, ಜನಪ್ರಿಯಗೊಳಿಸಿದ ಬೈಫ್ ಸಾಧನೆ ದೇಶಮಟ್ಟದಲ್ಲೇ ಅಂಗೀಕಾರಾರ್ಹ. ಆ ಮೂಲಕ ಸಾವಿರಾರು ಕುಟುಂಬಗಳ ಆರೋಗ್ಯ ಕಾಯ್ದು, ಇನ್ನಷ್ಟು ಸಂಘಸಂಸ್ಥೆ, ಸರಕಾರ ಮತ್ತು ಜನಸಮುದಾಯಕ್ಕೆ ಮಾದರಿ ಸೃಷ್ಟಿಸಿಕೊಟ್ಟ ಕೀರ್ತಿ ಇವರದು.

ಈಗ ಸುತ್ತಮುತ್ತಲಿಂದ 'ಮಳೆ ತೊಟ್ಟಿ ಮಾಡಿಸಿಕೊಡಿ' ಎಂಬ ಬೇಡಿಕೆ ಬರಹತ್ತಿದೆ. ಅಧ್ಯಯನಕ್ಕಾಗಿ ದೂರದೂರದ ಜಿಲ್ಲೆಗಳ ಅಧಿಕಾರಿಗಳು, ಅಧ್ಯಯನ ತಂಡಗಳು ಪುರವರಕ್ಕೆ ಬರುತ್ತಲಿವೆ.

'ಯೋಜನಾಪ್ರದೇಶದ 11 ಗ್ರಾಮಗಳಲ್ಲಿ 9 ಆರ್.ಒ. ಘಟಕಗಳಿವೆ. ಈ ಘಟಕಗಳಲ್ಲಿ 100 ಲೀಟರ್ ಒಳ್ಳೆ ನೀರು ಸಿಗಬೇಕಾದರೆ 400 ಲೀಟರನ್ನು ಸಂಸ್ಕರಿಸಬೇಕು. ಹೊರಗುಳಿಯುವ ಮುನ್ನೂರು ಲೀಟರ್ ಕೃಷಿಗೂ ಯೋಗ್ಯವಲ್ಲ. ಆರ್.ಒ. ಘಟಕ ಅಲ್ಲಲ್ಲಿನ ಅಂತರ್ಜಲ ಅವಲಂಬಿತ. ಅಂತರ್ಜಲ ಮಟ್ಟ ಇಳಿಯುತ್ತಿರುವಲ್ಲಿಗೆ ಅದು ಸುಸ್ಥಿರ ಪರಿಹಾರವಲ್ಲ. ಮಾತ್ರವಲ್ಲ, ಒಂದು ಘಟಕದ ವೆಚ್ಚ ತುಂಬಿ ಬರಬೇಕಾದರೆ 300–400 ಕುಟುಂಬಗಳು ಗ್ರಾಹಕರಾಗಿರಬೇಕು. ಅಲ್ಲದಿದ್ದರೆ, ಅವು ಆರ್ಥಿಕವಾಗಿ ಕಾರ್ಯಸಾಧ್ಯವಲ್ಲ' ಎನ್ನುತ್ತಾರೆ ಪಂಡಿತ್ ಪಾಟೀಲ್.

ಮೂವತ್ತು ವರ್ಷದಿಂದೀಚೆಗಿನ ಅವನತಿ ಈ ಫ್ಲೋರೋಸಿಸ್. ಹಿಂದೆ ಇಲ್ಲೂ ತೆರೆದ ಬಾವಿಗಳಿದ್ದುವು. 30ರಿಂದ 60 ಅಡಿಯಲ್ಲಿ ನೀರಿರುತ್ತಿತ್ತು. ಈಗ ಕೆಲವೆಡೆ ಬೋರ್‌ವೆಲ್ಲುಗಳು 1000 ಅಡಿಗೂ ಕೆಳಗೆ ಹೋಗಿವೆ.

'ಮೇಲುಜಲವೋ, ನೆಲದಡಿಯ ಮೇಲುಸ್ತರದ ಜಲವೋ ಎಲ್ಲೂ ಇಲ್ಲ', ಇವರು ಬೊಟ್ಟು ಮಾಡುತ್ತಾರೆ. ಮುಂದುವರಿದು ಅವರು ಎಚ್ಚರಿಸುತ್ತಾರೆ, 'ತಿಪಟೂರು ಕೂಡಾ ಫ್ಲೋರೈಡಿನ ಬಾರ್ಡರ್ ಲೈನಿನಲ್ಲಿದೆ. ಭವಿಷ್ಯದಲ್ಲಿ ಸಮಸ್ಯೆ ಹೆಚ್ಚಾಗದಿರಬೇಕಾದರೆ, ಈಗಿನಿಂದಲೇ ಸುಸ್ಥಿರ ಪರಿಹಾರಕ್ರಮ ಆರಂಭಿಸಬೇಕು.'

'ಕುಡಿಯಲು, ಅಡುಗೆಗೆ ಮಳೆನೀರು ಒದಗಿಸುವುದಕ್ಕಿಂತಲೂ ಮುಂದೆ ಹೋಗಬೇಕಿದೆ. ಆಯಾಯಾ ಪ್ರದೇಶಗಳಲ್ಲಿ ಬದು, ಕೃಷಿ ಹೊಂಡ ಇತ್ಯಾದಿಗಳ ಮೂಲಕ ಅಂತರ್ಜಲ ಮರುಪೂರಣ ಮಾಡಿದರಷ್ಟೇ ಫ್ಲೋರೋಸಿಸ್ಸಿನಿಂದ ಹೆಚ್ಚಿನ ರಕ್ಷಣೆ ಸಾಧ್ಯ', ಪಂಡಿತ್ ಒತ್ತಿ ಹೇಳುತ್ತಾರೆ, 'ಗದಗ ಜಿಲ್ಲೆಯ ಮುಂಡರಗಿಯಲ್ಲಿ ನಾವು ನಡೆಸಿದ ಪ್ರಯತ್ನಗಳಿಂದ ಇದು ಶ್ರುತಪಟ್ಟಿದೆ. ಅಲ್ಲಿ ನೀರಿನ ಫ್ಲೋರೈಡ್ ಅಂಶ ಗಣನೀಯವಾಗಿ ಇಳಿದಿದೆ.' ವಿವರಗಳಿಗೆ ಪ್ರತ್ಯೇಕ ಬಾಕ್ಸ್ ನೋಡಿ.

'ಎಂಜಿನರೇಗಾ'ದಡಿ (MGNREGA) ಮಳೆಕೊಯ್ಲು ಮಾಡಿಕೊಡಲು ನಿಯಮಗಳಡಿ ಅವಕಾಶ ಇದೆಯಂತೆ. ಈ ಕೆಲಸ ಎಲ್ಲೋ ಅಷ್ಟಿಷ್ಟು ನಡೆದಿರಬೇಕು. ಆದರೆ ಅತ್ಯವಶ್ಯ ಇರುವ ಫ್ಲೋರೈಡ್ ಪ್ರದೇಶದಲ್ಲಿ ಇನ್ನೂ ಅವರಿಂದ ಗಂಭೀರ ಪ್ರಯತ್ನ ಆರಂಭವಾಗಿಲ್ಲ ಎನ್ನುತ್ತಾರೆ ಇವರು.

ಸಂದೇಶ ಸ್ಪಷ್ಟವಿದೆ. ಫ್ಲೋರೋಸಿಸ್ ಸಂತ್ರಸ್ತರ ಹೊಟ್ಟೆಗೆ ಫ್ಲೋರೈಡ್‌ರಹಿತ ನೀರು ಪೂರೈಸುವುದು ಸಮಸ್ಯೆಗೆ ಪೂರ್ಣ ಪರಿಹಾರ ಅಲ್ಲ. ಆಯಾಯಾ ಪ್ರದೇಶದಲ್ಲಿ ಚೆನ್ನಾಗಿ ಅಂತರ್ಜಲ ಮರುಪೂರಣ ಮಾಡುವುದೇ ಇದಕ್ಕೆ ಸುಸ್ಥಿರ ಪರಿಹಾರ. ಸಮಸ್ಯೆ ಹುಟ್ಟಿದ್ದೇ ನೀರಿನ ಅತಿ ಬಳಕೆಯಿಂದ ತಾನೇ?

'ಇದು ಅಸಾಧ್ಯವೇನಲ್ಲ. ಸಮಸ್ಯಾಪ್ರದೇಶದಲ್ಲಿ ಅಂತರ್ಜಲ ಮರುಪೂರಣ ಮಾಡಬೇಕು. ಇದಕ್ಕೆ ಭಾರೀ ಪ್ರಮಾಣದ ಸಂಪನ್ಮೂಲ ಬೇಕು. ದೊಡ್ಡದೊಡ್ಡ ಕಂಪನಿಗಳಿಂದ ಸಿಎಸ್‌ಆರ್ ಫಂಡ್ ಪಡೆಯುವ ಯತ್ನ ಮಾಡಬೇಕು', ಪಂಡಿತ್ ಪಾಟೀಲ್ ಸಲಹೆ ಮಾಡುತ್ತಾರೆ.

ಬೈಫ್ ಸಂಪರ್ಕ: (08134) 251 337.
ಇ–ಮೇಲ್: **bisld.karnataka@baif.org.in**

ಚಿತ್ರಗಳು: ಬೈಫ್ ಸಂಗ್ರಹ

ನೀರಿಂಗಿದಾಗ ಇಳಿಯಿತು ಫ್ಲೋರೈಡ್

2006ರಿಂದ ಮುಂದಿನ ಐದು ವರ್ಷದವರೆಗೆ ಬೈಫ್ ಗದಗ ಜಿಲ್ಲೆಯ ಮುಂಡರಗಿ ಮತ್ತು ಶಿರಹಟ್ಟಿ ತಾಲೂಕುಗಳ 19 ಗ್ರಾಮಗಳಲ್ಲಿ ವ್ಯಾಪಕ ಅಂತರ್ಜಲ ಮರುಪೂರಣ ಚಟುವಟಿಕೆ ನಡೆಸಿತು.

ಇದರ ಫಲಿತಾಂಶ ತುಂಬ ಉತ್ತೇಜಕ. ಎರಡು ವರ್ಷಗಳಲ್ಲಿ ಕೆಲವು ಕಡೆ ಫ್ಲೋರೈಡಿನ ಪ್ರಮಾಣ ಶೇ. 30 ಕಡಿಮೆಯಾದರೆ, ಶೇ. 40ರಿಂದ ಅರ್ಧಕ್ಕರ್ಧ ಇಳಿದ ಜಾಗಗಳೂ ಇದ್ದುವು.

ವಿರೂಪಾಪುರ ಗ್ರಾಮದ ಮಠದ್ ತೆರೆದ ಬಾವಿಯಲ್ಲಿ ಫ್ಲೋರೈಡ್ ಪ್ರಮಾಣ 3.37 ಪಿಪಿಎಂನಿಂದ 2.01ಕ್ಕೆ ಇಳಿಯಿತು. ಗರಿಷ್ಠ ಪ್ರಮಾಣದಲ್ಲಿ ಫ್ಲೋರೈಡ್ ಹೊಂದಿದ್ದ (5.34) ಕಲಕೇರಿಯ ಮಸ್ತಿಕೊಪ್ಪ ರಸ್ತೆಯ ಸರಕಾರಿ ಆಸ್ಪತ್ರೆಯ ಬಳಿಯ ಹ್ಯಾಂಡ್ ಪಂಪ್ ಆಳವಡಿಸಿದ ಕೊಳವೆಬಾವಿಯಲ್ಲದು 4.84 ಪಿಪಿಎಂಗೆ ಇಳಿದಿತ್ತು.

ಹತ್ತು ಕಂತುಗಳಲ್ಲಿ ಪ್ರಕಟವಾದ 'ನೀರು–ನಿಧಿ' ಮಾಲಿಕೆ ಈ ಬರಹದೊಂದಿಗೆ ಕೊನೆಗೊಳ್ಳುತ್ತಿದೆ. ಆದರೆ, ನೀರದೀವಿಗೆ ಬೆಳಗುವ 'ಸುಧಾ' ಕಾಳಜಿ ನಿರಂತರವಾದುದು. –ಸಂ